

ಕೆಲ ಹೆಣ್ಣು ಮಕ್ಕಳಿಗೆ ಗಂಡನ ಮನೆಯಲ್ಲಿ ನೀಡುವ ಕಿರುಕುಳದಿಂದಾಗಿ ಮರಳಿ ತವರು ಮನೆಗೆ ಬರುವ ಸನ್ನಿವೇಶ ಎದುರಾಗುವುದಿದೆ. ಅನಿವಾರ್ಯವಾಗಿ ತವರು ಸೇರುವ ಹೆಣ್ಣು ಮಕ್ಕಳಿಗೆ ಬದುಕು ದುಸ್ತರವಾಗುತ್ತದೆ. ಈ ಸಮಸ್ಯೆ ನಿವಾರಣೆಗಾಗಿ ಹೆಣ್ಣುಮಕ್ಕಳಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಪಾಲು ಇದೆ ಎಂದು ಸುಪ್ರೀಂ ಕೋರ್ಟ್ ಕಾನೂನು ರೂಪಿಸಿತು. ಇದಾದ ಮೇಲೆ ಗಂಡು ಮಕ್ಕಳಿದ್ದ ಮನೆಯಲ್ಲಿ ಅಣ್ಣ ತಂಗಿ ಸಂಬಂಧಕ್ಕಿಂತ ಆಸ್ತಿ ವ್ಯಾಜ್ಯವೇ ಮೇಲ್ಪಂಕ್ತಿ ಹಾಕಿತು. ಮದುವೆಯಾದ ನಂತರ ತವರುಮನೆ ಎಂಬುದು ಹೆಣ್ಣಿಗೆ ಒಂದು ನೆನಪು ಮತ್ತು ಭಾವನಾತ್ಮಕ ಸಂಬಂಧವಾಗಿ ಉಳಿಯುತ್ತದೆ. ಆಸ್ತಿ ವ್ಯಾಜ್ಯದ ದೆಸೆಯಿಂದಾಗಿ ಕಳೆದುಹೋಗುತ್ತಿದೆಯೇ ಕಳ್ಳುಬಳ್ಳಿ ಸಂಬಂಧ ಎಂಬ ಆತಂಕವೂ ಹೆಣ್ಣಿಗೆ ಕಾಡುತ್ತದೆ.

**ಸಮರಸವೇ ಜೀವನ!**

ಮನೆಯಲ್ಲಿ ತಂದೆ ಮಕ್ಕಳ ಮಧ್ಯೆ, ಅಣ್ಣ ತಮ್ಮಂದಿರ ನಡುವೆ ಹೊಂದಾಣಿಕೆ, ಪ್ರೀತಿ ವಿಶ್ವಾಸ ಸದಾ ಇದ್ದರೆ ಪಿತ್ರಾರ್ಜಿತ ಆಸ್ತಿ ಪಾಲು ಮಾಡುವುದು ಬಹಳ ಸುಲಭ, ಸುರಳೀತ. ಇಲ್ಲೊಂದು ಕುಟುಂಬದ ಕಥೆ ಎಲ್ಲರಿಗೂ ಆದರ್ಶವಾದದ್ದು.

ದಕ್ಷಿಣ ಕನ್ನಡದ ಪುತ್ತೂರಿನ ರಾಜೀವ ನಾರಾಯಣರಾಯರಿಗೆ ಇಬ್ಬರೇ ಗಂಡು ಮಕ್ಕಳು. ಹಿರಿಯ ಮಗ ಬೆಂಗಳೂರಿನಲ್ಲಿ ಎಂಜಿನಿಯರ್. ಕಿರಿಯ ಮಗ ಓದಿದ್ದರೂ ಮನೆವಾರ್ತೆ, ಅಡಿಕೆ ತೋಟ ಸೇರಿದಂತೆ ಮನೆಯ ಸಮಸ್ತ ಆಸ್ತಿ ನಿರ್ವಹಣೆ ಮಾಡಿಕೊಂಡು ಅಪ್ಪ ಅಮ್ಮನ ಆರೋಗ್ಯ ವಿಚಾರಿಸುತ್ತಾ ಮನೆಯಲ್ಲೇ ಉಳಿದ. ಅಪ್ಪನಿಗೆ ಕೊನೆಗಾಲ ಸಮೀಪಿಸುತ್ತಿದೆ ಎನಿಸುತ್ತಿರುವಾಗಲೇ ಹಿರಿಯ ಮಗನನ್ನೂ ಮನೆಗೆ ಕರೆದು ಆಸ್ತಿ ಹಂಚಿಕೆ ಬಗ್ಗೆ ಮಾತುಕತೆ ನಡೆಸಿದರು.

‘ಇಬ್ಬರೂ ನಮ್ಮ ಮಕ್ಕಳೇ. ನನ್ನ ಆಸ್ತಿಯಲ್ಲಿ ಇಬ್ಬರಿಗೂ ಸಮಪಾಲು ಮಾಡೋಣ’ ಎಂದಾಗ ಹಿರಿಯ ಮಗ, ‘ನಾನು ಚೆನ್ನಾಗಿ ಸಂಪಾದಿಸುತ್ತಿದ್ದು, ಜೀವನ ನಿರ್ವಹಣೆಗೆ ಏನೂ ಕೊರತೆ ಇಲ್ಲ. ಭಾವನಾತ್ಮಕ ಸಂಬಂಧವಿರುವುದರಿಂದ ಪಿತ್ರಾರ್ಜಿತ ಆಸ್ತಿಯನ್ನು ಭಾಗ ಮಾಡುವುದು ಬೇಡ. ಹಬ್ಬಹರಿದಿನಗಳಲ್ಲಿ ಮನೆಗೆ ಬಂದು ಹೋಗಲು ಅವಕಾಶ ಇರಬೇಕು’ ಎಂದು ಸ್ಪಷ್ಟವಾಗಿ ಹೇಳಿಬಿಟ್ಟ. ಮನೆಯ ಎಲ್ಲ ಸದಸ್ಯರ ಸಮ್ಮುಖದಲ್ಲಿ ಮಾತುಕತೆ ನಡೆಸಿದ ರಾಯರು, ಮಕ್ಕಳ ಇಚ್ಛೆಯಂತೆಯೇ ನಡೆದುಕೊಂಡರು.

ಕುಟುಂಬದ ಸದಸ್ಯರ ಮದುವೆ, ಮುಂಜಿಯಂತಹ ವಿಶೇಷ ಸಂದರ್ಭಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಕುಟುಂಬದ

**ಕೂಡುಕುಟುಂಬದ ಆಸ್ತಿ ಹಂಚಿಕೆ ವಿಚಾರದಲ್ಲಿ ಸುಶಿಕ್ಷಿತ ಹೆಣ್ಣುಮಕ್ಕಳೂ ವಂಚನೆಗೆ ಒಳಗಾಗಿರುತ್ತಾರೆ. ಇದಕ್ಕೆ ಕಾನೂನಿನಲ್ಲಿ ಸೂಕ್ತ ಪರಿಹಾರ ಇದೆ.**